**v) ನೋಂದಾಯಿತ ಕಛೇರಿ ವಿಳಾಸ ಮತ್ತು ಸಂಪರ್ಕ ವಿವರಗಳು :**

| | |
|---|---|
| ವಿಳಾಸ<br>ಪಟ್ಟಣ/ನಗರ | ಮೂರನೇ ಮಹಡಿ, ಕೆಹೆಚ್‌ಬಿ ಶಾಪಿಂಗ್ ಕಾಂಪ್ಲೆಕ್ಸ್, ನ್ಯಾಷನಲ್ ಗೇಮ್ಸ್ ವಿಲೇಜ್<br>ಕೋರಮಂಗಲ<br>ಬೆಂಗಳೂರು |
| ರಾಜ್ಯ<br>ಪಿನ್ ಸಂಕೇತ | ಕರ್ನಾಟಕ<br>560 047 |
| ದೇಶದ ಹೆಸರು<br>ದೇಶದ ಸಂಕೇತ | ಭಾರತ<br>91 |
| ದೂರವಾಣಿ<br>STD ಸಂಖ್ಯೆಯೊಂದಿಗೆ | (080) 2570 5723<br>ಕ್ಷೇತ್ರ ಸಂಕೇತ ಸಂಖ್ಯೆ ಸಂಖ್ಯೆ |
| ಫ್ಯಾಕ್ಸ್ ಸಂಖ್ಯೆ | (080) 2571 8365<br>ಕ್ಷೇತ್ರ ಸಂಕೇತ ಸಂಖ್ಯೆ ಸಂಖ್ಯೆ |
| ಮಿಂಚಂಚೆ ವಿಳಾಸ<br>ವೆಬ್‌ಸೈಟ್ ಇದ್ದಲ್ಲಿ | hgml@vsnl.com<br>www.huttigold.co.in |

**vi) ಸ್ಟಾಕ್ ಎಕ್ಸ್‌ಛೇಂಜ್‌ಗಳಲ್ಲಿ ಪಟ್ಟಿಯಾಗಿದೆಯೇ** - ಇಲ್ಲ

ಆಗಿದ್ದಲ್ಲಿ ಯಾವ ಸ್ಟಾಕ್ ಎಕ್ಸ್‌ಛೇಂಜ್‌ನಲ್ಲಿ ಷೇರುಗಳು ಪಟ್ಟಿಯಾಗಿವೆ

| ಕ್ರಮ ಸಂ. | ಸ್ಟಾಕ್ ಎಕ್ಸ್‌ಛೇಂಜ್‌ನ ಹೆಸರು | ಸ್ಟಾಕ್ ಎಕ್ಸ್‌ಛೇಂಜ್‌ನ ಸಂಕೇತ |
|---|---|---|
| | ಅನ್ವಯವಾಗದು | ಅನ್ವಯವಾಗದು |
| | | |

**vii) ರಿಜಿಸ್ಟ್ರಾರುಗಳು ಮತ್ತು ಷೇರು ವರ್ಗಾವಣೆ ಏಜೆಂಟುಗಳ ಹೆಸರು, ವಿಳಾಸ ಮತ್ತು ಸಂಪರ್ಕ ವಿವರಗಳು :**

| | |
|---|---|
| ರಿಜಿಸ್ಟ್ರಾರು ಮತ್ತು ಷೇರುವರ್ಗಾವಣೆ ಏಜೆಂಟರುಗಳ ಹೆಸರು | ಅನ್ವಯವಾಗದು |
| ವಿಳಾಸ<br>ಪಟ್ಟಣ/ನಗರ | |
| ರಾಜ್ಯ<br>ಪಿನ್ ಸಂಕೇತ | |
| ದೇಶದ ಹೆಸರು<br>ದೇಶದ ಸಂಕೇತ | |
| ದೂರವಾಣಿ<br>STD ಸಂಖ್ಯೆಯೊಂದಿಗೆ | |
| ಫ್ಯಾಕ್ಸ್ ಸಂಖ್ಯೆ | |
| ಮಿಂಚಂಚೆ ವಿಳಾಸ<br>ವೆಬ್‌ಸೈಟ್ ಇದ್ದಲ್ಲಿ | |

**II. ಕಂಪನಿಯ ಮುಖ್ಯ ವ್ಯಾಪಾರ ಚಟುವಟಿಕೆಗಳು :**

ಕಂಪನಿಯ ಒಟ್ಟು ವ್ಯಾಪಾರ ಚಟುವಟಿಕೆಗಳೆಡೆಗೆ, ಶೇಕಡ 10 ಮತ್ತು ಅದಕ್ಕಿಂತ ಅಧಿಕವಾಗಿ ಅಂಶದಾನವನ್ನು ನೀಡುವ ವ್ಯಾಪಾರ ಚಟುವಟಿಕೆಗಳ ವಿವರಗಳನ್ನು ನೀಡತಕ್ಕದ್ದು :-

| ಕ್ರಮ ಸಂ. | ಮುಖ್ಯ ಪದಾರ್ಥಗಳ ಸೇವೆಗಳ ಹೆಸರು ಮತ್ತು ವಿವರಗಳು | ಎನ್‌ಐಸಿ ಸಂಕೇತ | ಕಂಪನಿಯ ಒಟ್ಟು ವ್ಯಾಪಾರ ಚಟುವಟಿಕೆಗಳ ಶೇಕಡಾವಾರು |
|---|---|---|---|
| 1 | ಚಿನ್ನ ಮತ್ತು ಬೆಳ್ಳಿಯ ಉತ್ಪಾದನೆ | 07295 | 83.75% |
| 2 | | | |
| 3 | | | |

**III.** ಸ್ವಾಮ್ಯ, ಅಧೀನ ಮತ್ತು ಸಹವರ್ತಿ ಕಂಪನಿಗಳ ವಿವರಗಳು -

| ಕ್ರಮ ಸಂಖ್ಯೆ | ಕಂಪನಿಯ ಹೆಸರು ಮತ್ತು ವಿಳಾಸ | ಸಿಐಎನ್/ ಜಿಎಲ್‌ಎನ್ | ಸ್ವಾಮ್ಯ/ ಅಧೀನ/ ಸಹವರ್ತಿ | ಹೊಂದಿರುವ ಶೇಕಡಾವಾರು ಷೇರುಗಳು | ಅನ್ವಯವಾಗುವ ಸೆಕ್ಷನ್ |
|---|---|---|---|---|---|
| 1 | | ಅನ್ವಯವಾಗದು | | | |
| 2 | | | | | |

**IV. ಷೇರುಹಿಡುವಳಿಯ ಮಾದರಿ (ಒಟ್ಟು ಈಕ್ವಿಟಿ ಷೇರುಗಳ ವಿಂಗಡಣೆ ಮತ್ತು ಅವುಗಳ ಶೇಕಡಾವಾರು ವಿವರಗಳು)**

***i) ಷೇರು ಹಿಡುವಳಿಗಳ ಪ್ರವರ್ಗ***

| ಷೇರುದಾರರ ಪ್ರವರ್ಗ | ವರ್ಷದ ಪ್ರಾರಂಭದಲ್ಲಿ ಹೊಂದಿದ ಷೇರುಗಳ ಸಂಖ್ಯೆ | | | | ವರ್ಷದ ಅಂತ್ಯದಲ್ಲಿ ಹೊಂದಿದ ಷೇರುಗಳ ಸಂಖ್ಯೆ | | | | ಬದಲಾವಣೆಯ ಶೇಕಡಾವಾರು |
|---|---|---|---|---|---|---|---|---|---|
| | ಡಿಮ್ಯಾಟ್ | ಭೌತಿಕ | ಒಟ್ಟು | ಒಟ್ಟು ಷೇರುಗಳ ಶೇಕಡಾವಾರು | ಡಿಮ್ಯಾಟ್ | ಭೌತಿಕ | ಒಟ್ಟು | ಒಟ್ಟು ಷೇರುಗಳ ಶೇಕಡಾವಾರು | |
| **ಎ. ಪ್ರವರ್ತಕರು** | | | | | | | | | |
| **(1) ಭಾರತೀಯ** | | | | | | | | | |
| a) ವ್ಯಕ್ತಿಗಳು / ಹಿಂದು ಅವಿಭಕ್ತ ಕುಟುಂಬ | | | | | | | | | |
| b) ಕೇಂದ್ರ ಸರ್ಕಾರ | - | - | - | - | - | - | - | - | - |
| c) ರಾಜ್ಯ ಸರ್ಕಾರ | - | 220.18 | 220.18 | 74.34 | - | 220.18 | 220.18 | 74.34 | ಇಲ್ಲ |
| d) ಕಾರ್ಪೊರೇಟ್ ನಿಕಾಯಗಳು | - | 72.50 | 72.50 | 24.47 | - | 72.50 | 72.50 | 24.47 | ಇಲ್ಲ |
| e) ಬ್ಯಾಂಕುಗಳು/ ವಿತ್ತೀಯ ಸಂಸ್ಥೆಗಳು | - | - | - | - | - | - | - | - | - |
| f) ಇತರೇ ಖಾಸಗಿ ವ್ಯಕ್ತಿಗಳು | | | | | | | | | |
| **ಉಪಮೊತ್ತ(ಎ1)** | – | 292.68 | 292.68 | 98.81 | – | 292.68 | 292.68 | 98.81 | ಇಲ್ಲ |

| | | | | | | | | | |
|---|---|---|---|---|---|---|---|---|---|
| **2. ವಿದೇಶೀಯ** | – | – | – | – | – | – | – | – | – |
| ಎ) ಅನಿವಾಸಿ ಭಾರತೀಯರು ವ್ಯಕ್ತಿಗಳು | –<br>– | – | – | – | – | – | – | – | – |
| ಬಿ) ಇತರೇ ವ್ಯಕ್ತಿಗಳು | – | – | – | – | – | – | – | – | – |
| ಸಿ) ಕಾರ್ಪೋರೇಟ್ ನಿಕಾಯಗಳು | – | – | – | – | – | – | – | – | – |
| ಡಿ) ಬ್ಯಾಂಕ್‌ಗಳು/ ವಿತ್ತೀಯ ಸಂಸ್ಥೆಗಳು | – | – | – | – | – | – | – | – | – |
| ಇ) ಇತರೇ | – | – | – | – | – | – | – | – | – |
| **ಉಪಮೊತ್ತ (ಎ–2)** | – | – | – | – | – | – | – | – | – |
| ಪ್ರವರ್ತಕರ ಒಟ್ಟು ಷೇರು ಹಿಡುವಳಿ ಎ=(ಎ1+ಎ2) | – | **292.68** | **292.68** | **98.81** | – | **292.68** | **292.68** | **98.81** | ಇಲ್ಲ |
| | | | | | | | | | |
| **ಬಿ. ಸಾರ್ವಜನಿಕ ಷೇರು ಹಿಡುವಳಿ** | – | – | – | – | – | – | – | – | – |
| 1. ಸಂಸ್ಥೆಗಳು | – | – | – | – | – | – | – | – | – |
| ಎ)ಮ್ಯೂಚುಯಲ್ ಫಂಡ್‌ಗಳು | – | – | – | – | – | – | – | – | – |
| ಬಿ) ಬ್ಯಾಂಕುಗಳು/ ವಿತ್ತೀಯ ಸಂಸ್ಥೆಗಳು | – | – | – | – | – | – | – | – | – |
| ಸಿ) ಕೇಂದ್ರ ಸರ್ಕಾರ | – | – | – | – | – | – | – | – | – |
| ಡಿ) ರಾಜ್ಯ ಸರ್ಕಾರ | – | – | – | – | – | – | – | – | – |
| ಇ) ವೆಂಚರ್ ಕ್ಯಾಪಿಟಲ್ ಫಂಡುಗಳು | – | – | – | – | – | – | – | – | – |
| ಎಫ್) ವಿಮಾ ಕಂಪನಿಗಳು | – | – | – | – | – | – | – | – | – |
| ಜಿ) ವಿದೇಶಿ ಹೂಡಿಕಾ ಸಂಸ್ಥೆಗಳು | – | – | – | – | – | – | – | – | – |
| ಎಚ್) ವಿದೇಶಿ ವೆಂಚರ್ ಕ್ಯಾಪಿಟಲ್ ಫಂಡುಗಳು | – | – | – | – | – | – | – | – | – |
| i) ಇತರರು ಎ) ನ್ಯಾಸಗಳು | – | 0.03 | 0.03 | 0.01 | – | 0.03 | 0.03 | 0.01 | – |
| ಬಿ) ಆರ್ಥಿಕ ಸೇವೆಗಳು | – | 0.43 | 0.43 | 0.15 | – | 0.43 | 0.43 | 0.15 | – |
| **ಉಪಮೊತ್ತ ಬಿ(1)** | – | 0.46 | 0.46 | 0.16 | – | 0.46 | 0.46 | 0.16 | – |

| | | | | | | | | | |
|---|---|---|---|---|---|---|---|---|---|
| **2) ಸಂಸ್ಥೆಗಳಲ್ಲದ್ದು** | - | - | - | - | - | - | - | - | - |
| ಎ) ಕಾರ್ಪೋರೇಟ್ ನಿಕಾಯಗಳು | - | - | - | - | - | - | - | - | - |
| i) ಭಾರತೀಯ | - | - | - | - | - | - | - | - | - |
| ii) ವಿದೇಶಿ | - | - | - | - | - | - | - | - | - |
| ಬಿ) ವ್ಯಕ್ತಿಗಳು | - | 3.06 | 3.06 | 1.03 | - | 3.06 | 3.06 | 1.03 | ಇಲ್ಲ |
| i) ಒಂದು ಲಕ್ಷ ರೂ. ವರೆಗಿನ ಸಾಮಾನ್ಯ ಷೇರು ಬಂಡವಾಳವನ್ನು ಹೊಂದಿರುವ ವ್ಯಕ್ತಿಗಳು | - | - | - | - | - | - | - | - | - |
| ii) ಒಂದು ಲಕ್ಷ ರೂ. ಗಳನ್ನು ಮೀರಿ ಸಾಮಾನ್ಯ ಷೇರು ಬಂಡವಾಳ ಹೊಂದಿರುವ ವ್ಯಕ್ತಿಗಳು | - | - | - | - | - | - | - | - | - |
| ಸಿ) ಇತರರು (ನಿರ್ದಿಷ್ಟ ಪಡಿಸಿ) | - | - | - | - | - | - | - | - | - |
| **ಉಪಮೊತ್ತ = ಬಿ(2)** | - | - | - | - | - | - | - | - | - |
| ಒಟ್ಟು ಸಾರ್ವಜನಿಕ ಷೇರು ಹಿಡುವಳಿ ಬಿ=ಬಿ(1)+ಬಿ(2) | - | - | - | - | - | - | - | - | - |
| ಅಭಿರಕ್ಷಕರು ಹೊಂದಿರುವ ಜಿಡಿಆರ್ ಮತ್ತು ಎಡಿಆರ್‌ಗಳ ಷೇರುಗಳು | - | - | - | - | - | - | - | - | - |
| ಒಟ್ಟು ಮೊತ್ತ (ಎ+ಬಿ+ಸಿ) | **-** | **296.20** | **296.20** | **100.00** | **-** | **296.20** | **296.20** | **100.00** | ಇಲ್ಲ |

**(ii)** ಪ್ರವರ್ತಕರ ಷೇರು ಹಿಡುವಳಿ

| ಕ್ರಮ ಸಂಖ್ಯೆ | ಷೇರುದಾರರ ಹೆಸರು | ವರ್ಷದ ಪ್ರಾರಂಭದಲ್ಲಿ ಹೊಂದಿದ ಷೇರುಗಳ ಸಂಖ್ಯೆ | | | ವರ್ಷದ ಅಂತ್ಯದಲ್ಲಿ ಹೊಂದಿದ ಷೇರುಗಳ ಸಂಖ್ಯೆ | | | |
|---|---|---|---|---|---|---|---|---|
| | | ಷೇರುಗಳ ಸಂಖ್ಯೆ | ಒಟ್ಟು ಷೇರುಗಳ ಮೇಲಿನ ಶೇಕಡಾವಾರು | ಅಡಮಾನ ಅಥವಾ ಆಧಾರ ನೀಡಲಾದ ಒಟ್ಟು ಷೇರುಗಳ ಮೇಲಿನ ಶೇಕಡಾವಾರು | ಷೇರುಗಳ ಸಂಖ್ಯೆ | ಒಟ್ಟು ಷೇರುಗಳ ಮೇಲಿನ ಶೇಕಡಾವಾರು | ಒಟ್ಟು ಷೇರುಗಳಿಗೆ ಅಡಮಾನ / ಆಧಾರ ನೀಡಲಾದ ಷೇರುಗಳ ಶೇಕಡಾವಾರು | ವರ್ಷದಲ್ಲಿ ಷೇರು ಹಿಡುವಳಿಗಳ ಶೇಕಡಾವಾರು ಬದಲಾವಣೆ |
| 1 | ಕರ್ನಾಟಕ ಸರ್ಕಾರ | 220186 | 74.34 | – | 220186 | 74.34 | – | ಇಲ್ಲ |
| 2 | ಕೆಎಸ್ಐಐಡಿಸಿ | 57500 | 19.41 | – | 57500 | 19.41 | – | ಇಲ್ಲ |
| 3 | ಎಂಎಂಎಲ್ | 15000 | 5.06 | – | – | – | – | ಇಲ್ಲ |
| | ಒಟ್ಟು | **292686** | **98.81** | – | **292686** | **98.81** | – | ಇಲ್ಲ |

**(iii)** ಪ್ರವರ್ತಕರ ಷೇರು ಹಿಡುವಳಿಯಲ್ಲಿನ ಬದಲಾವಣೆ (ಬದಲಾವಣೆ ಇದ್ದಲ್ಲಿ ನಿರ್ದಿಷ್ಟಪಡಿಸಿ)

| ಕ್ರಮ ಸಂಖ್ಯೆ | | ವರ್ಷದ ಪ್ರಾರಂಭದಲ್ಲಿ | | ವರ್ಷದಲ್ಲಿನ ಸಂಚಿತ ಷೇರುಗಳ ಹಿಡುವಳಿ | |
|---|---|---|---|---|---|
| | | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇಕಡಾವಾರು | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇಕಡಾವಾರು |
| | ವರ್ಷದ ಆರಂಭದಲ್ಲಿ | | | | |
| | ದಿನಾಂಕದ ಆಧಾರದಲ್ಲಿ ವರ್ಷದಲ್ಲಿ ಉಂಟಾದ ಪ್ರವರ್ತಕ ಷೇರುಗಳಲ್ಲಿನ ಏರಿಕೆ/ಇಳಿಕೆಗಳು–ಏರಿಕೆ ಮತ್ತು ಇಳಿಕೆಯಲ್ಲಿನ ಕಾರಣಗಳನ್ನು ನಿರ್ದಿಷ್ಟಪಡಿಸಿ (ಉದಾಹರಣೆಗೆ ನೀಡಿಕೆ, ವರ್ಗಾವಣೆ, ಬೋನಸ್ಸು, ಪರಿಶ್ರಮ ಬಗೆಗಿನವು) | ಇಲ್ಲ | | | |
| | ವರ್ಷಾಂತ್ಯದಲ್ಲಿ | | | | |

**(iv) ನಿರ್ದೇಶಕರು, ಪ್ರವರ್ತಕರು, ಜಿಡಿಆರ್ ಮತ್ತು ಎಡಿಆರ್‌ಗಳನ್ನು ಹೊಂದಿಲ್ಲದಿರುವ ಹತ್ತು ಅಗ್ರಷೇರುದಾರರ ಷೇರು ಹಿಡುವಳಿಗಳ ಮಾದರಿ**

<table>
<tr><td>ಕ್ರಮ ಸಂಖ್ಯೆ</td><td></td><td colspan="2">ವರ್ಷದ ಪ್ರಾರಂಭದಲ್ಲಿ</td><td colspan="2">ವರ್ಷದಲ್ಲಿನ ಸಂಚಿತ ಷೇರುಗಳ ಹಿಡುವಳಿ</td></tr>
<tr><td></td><td>ಪ್ರತಿ ನಿರ್ದೇಶಕರ ಮತ್ತು ಪ್ರಮುಖ ಆಡಳಿತ ಸಿಬ್ಬಂದಿ</td><td>ಷೇರುಗಳ ಸಂಖ್ಯೆ</td><td>ಕಂಪನಿಯ ಒಟ್ಟು ಷೇರುಗಳ ಶೇಕಡಾವಾರು</td><td>ಷೇರುಗಳ ಸಂಖ್ಯೆ</td><td>ಕಂಪನಿಯ ಒಟ್ಟು ಷೇರುಗಳ ಶೇಕಡಾವಾರು</td></tr>
<tr><td></td><td>ವರ್ಷದ ಆರಂಭದಲ್ಲಿ</td><td colspan="4" rowspan="3">ಇಲ್ಲ</td></tr>
<tr><td></td><td>ದಿನಾಂಕಗಳ ಆಧಾರದಲ್ಲಿ ವರ್ಷದಲ್ಲಿ ಉಂಟಾದ ಷೇರುಗಳ ಏರಿಕೆ/ಇಳಿಕೆ – (ಏರಿಕೆ ಮತ್ತು ಇಳಿಕೆಗಳ ಕಾರಣಗಳನ್ನು ನಿರ್ದಿಷ್ಟಪಡಿಸಿ ಉದಾಹರಣೆಗೆ ನೀಡಿಕೆ, ವರ್ಗಾವಣೆ ಬೋನಸ್ಸು, ಪರಿಶ್ರಮದ ಬಗೆಗಿನವು)</td></tr>
<tr><td></td><td>ವರ್ಷಾಂತ್ಯದಲ್ಲಿ ಅಥವಾ ಬೇರ್ಪಟ್ಟ ದಿನಾಂಕದಂದು (ವರ್ಷದಲ್ಲಿ ಬೇರ್ಪಟ್ಟಿದ್ದರೆ)</td></tr>
</table>

**(v) ನಿರ್ದೇಶಕರ ಮತ್ತು ಪ್ರಮುಖ ಆಡಳಿತಾತ್ಮಕ ಸಿಬ್ಬಂದಿಗಳ ಷೇರು ಹಿಡುವಳಿಗಳು**

| ಕ್ರಮ ಸಂಖ್ಯೆ | | ವರ್ಷದ ಪ್ರಾರಂಭದಲ್ಲಿ | | ವರ್ಷದಲ್ಲಿನ ಸಂಚಿತ ಷೇರುಗಳ ಹಿಡುವಳಿ | |
|---|---|---|---|---|---|
| | ಪ್ರತಿ ನಿರ್ದೇಶಕರ ಮತ್ತು ಪ್ರಮುಖ ಆಡಳಿತ ಸಿಬ್ಬಂದಿ | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇಕಡಾವಾರು | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇಕಡಾವಾರು |
| | ವರ್ಷದ ಆರಂಭದಲ್ಲಿ | | | | |
| | ದಿನಾಂಕದ ಆಧಾರದಲ್ಲಿ ವರ್ಷದಲ್ಲಿ ಉಂಟಾದ ಷೇರುಗಳಲ್ಲಿನ ಏರಿಕೆ/ಇಳಿಕೆ– ವಿವರಗಳೊಂದಿಗೆ– (ಏರಿಕೆ ಮತ್ತು ಇಳಿಕೆಗಳ ಕಾರಣಗಳನ್ನು ನಿರ್ದಿಷ್ಟಪಡಿಸಿ– ಉದಾಹರಣೆಗೆ ನೀಡಿಕೆ, ವರ್ಗಾವಣೆ, ಬೋನಸ್ಸು, ಪರಿಶ್ರಮದ ಬಗೆಗಿನವು) | ಇಲ್ಲ | | | |
| | ವರ್ಷಾಂತ್ಯದಲ್ಲಿ | | | | |

**V. ಋಣಗ್ರಸ್ತತೆ**

**ಒದಗಿ ಬಂದು ಬಾಕಿ ಇರುವ ಬಡ್ಡಿ/ಪಾವತಿಗಾಗಿ ಬಾಕಿಯಿರದ ಬಡ್ಡಿಯನ್ನೊಳಗೊಂಡಂತೆ ಇರುವ ಕಂಪನಿಯ ಋಣಗ್ರಸ್ತತೆ**

| | **ಠೇವಣಿಗಳನ್ನು ಹೊರತು ಪಡಿಸಿದ ಖಾತ್ರಿ ಸಾಲಗಳು** | **ಖಾತ್ರಿಯಿಲ್ಲದ ಸಾಲಗಳು** | **ಠೇವಣಿಗಳು** | **ಒಟ್ಟು ಋಣಗ್ರಸ್ತತೆ** |
|---|---|---|---|---|
| **ವರ್ಷದಾರಂಭದಲ್ಲಿನ ಋಣಗ್ರಸ್ತತೆ** | | | | |
| i) ಅಸಲು ಮೊತ್ತ | | | | |
| ii) ಬಾಕಿಯಿರುವ ಪಾವತಿಸಿಲ್ಲದ ಬಡ್ಡಿ | | | | |
| iii) ಒದಗಿ ಬಂದ ಬಾಕಿಯಿರದ ಬಡ್ಡಿ | | | | |
| **ಒಟ್ಟು** (i+ii+iii) | | | | |
| **ವರ್ಷದಲ್ಲಿನ ಋಣಗ್ರಸ್ತತೆಯಲ್ಲಿ ಬದಲಾವಣೆ** | | | | |
| • ಕೂಡಿಕೆ | | ಇಲ್ಲ | | |
| • ಕಳೆತ | | | | |
| ನಿವ್ವಳ ಬದಲಾವಣೆ | | | | |
| ವರ್ಷಾಂತ್ಯದಲ್ಲಿನ ಋಣಗ್ರಸ್ತತೆ | | | | |
| i) ಅಸಲಿನ ಮೊತ್ತ | | | | |
| ii) ಬಾಕಿಯಿರುವ ಪಾವತಿಸಿಲ್ಲದ ಬಡ್ಡಿ | | | | |
| iii) ಒದಗಿ ಬಂದ ಬಾಕಿಯಿರದ ಬಡ್ಡಿ | | | | |
| **ಒಟ್ಟು (i+ii+iii)** | | | | |

**VI.** ನಿರ್ದೇಶಕರುಗಳು ಮತ್ತು ಪ್ರಮುಖ ಆಡಳಿತ ಸಿಬ್ಬಂದಿಯ ಸಂಭಾವನೆ

*A.ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಕಾಲಿಕ ನಿರ್ದೇಶಕರು/ ಅಥವಾ ವ್ಯವಸ್ಥಾಪಕರು*

| ಕ್ರಮ ಸಂ. | ಸಂಭಾವನೆಯ ವಿವರಗಳು | ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಕಾಲಿಕ ನಿರ್ದೇಶಕರು ವ್ಯವಸ್ಥಾಪಕರುಗಳು | | | | ಒಟ್ಟು ಮೊತ್ತ |
|---|---|---|---|---|---|---|
| | | ---- | ---- | ---- | ---- | |
| 1 | ಒಟ್ಟು ವೇತನ | | | | Rs. | Rs. |
| | (a) ಆದಾಯ ತೆರಿಗೆ 1961ರ ಸೆಕ್ಷನ್ 17(1)ರ ರೀತ್ಯ ವೇತನ | | | | 10,76,192 | 10,76,192 |
| | (b) ಆದಾಯ ತೆರಿಗೆ 1961ರ ಸೆಕ್ಷನ್ 17(2)ರ ರೀತ್ಯ ಸವಲತ್ತುಗಳ ಮೌಲ್ಯ | | | | | |
| | (c) ಆದಾಯ ತೆರಿಗೆ 1961ರ ಸೆಕ್ಷನ್ 17(3)ರ ರೀತ್ಯ ವೇತನ ಬದಲಿಗೆ ಲಾಭ | | | | | |
| 2 | ಸ್ಟಾಕ್ ಆಪ್ಶನ್ | - | - | - | - | - |
| 3 | ಪರಿಶ್ರಮ ಷೇರುಗಳ | - | - | - | - | - |
| 4 | ದಳ್ಳಾಳಿ | - | - | - | - | - |
| | ಲಾಭದ ಶೇಕಡಾವಾರು | - | - | - | - | - |
| 5 | ಇತರೇ (ನಿರ್ದಿಷ್ಟಪಡಿಸಿ) | - | - | - | - | - |
| | ಒಟ್ಟು(ಎ) | | | | 10,76,192 | 10,76,192 |
| | ಕಾಯಿದೆಯ ರೀತ್ಯ ಗರಿಷ್ಟ ಮೊಬಲಗು | - | - | - | - | - |

*B.* ಇತರೇ ನಿರ್ದೇಶಕರುಗಳಿಗೆ ಸಂಭಾವನೆ

| ಕ್ರಮ ಸಂ. | ಸಂಭಾವನೆಯ ವಿವರಗಳು | ನಿರ್ದೇಶಕರ ಹೆಸರುಗಳು | | | | ಒಟ್ಟು ಮೊತ್ತ |
|---|---|---|---|---|---|---|
| | | ---- | ---- | ---- | ---- | |
| 1 | ಸ್ವತಂತ್ರ ನಿರ್ದೇಶಕರು | | - | - | - | - - |
| | • ನಿರ್ದೇಶಕ ಮಂಡಳಿ/ಸಮಿತಿಯ ಸಭೆಗಳ ಹಾಜರಿಗೆ ನೀಡಲಾದ ಫೀಸು | | | | | 57,000 |
| | • ದಳ್ಳಾಳಿ ರುಸುಮು | - | - | - | - | - |
| | • ಇತರೆ (ದಯವಿಟ್ಟು ನಿರ್ದಿಷ್ಟ ಪಡಿಸಿ) | - | - | - | - | - |
| | **ಒಟ್ಟು (1)** | | | | | 57,000 |

| | | | | | | |
|---|---|---|---|---|---|---|
| 2 | ಇತರೇ ಕಾರ್ಯನಿರ್ವಾಹಕರಲ್ಲದ ನಿರ್ದೇಶಕರುಗಳು | - | - | - | - | - |
| | • ನಿರ್ದೇಶಕ ಮಂಡಳಿ/ಸಮಿತಿ ಸಭೆಗಳ ಹಾಜರಿಗೆ ನೀಡಲಾದ ಫೀಸು | | | | | |
| | • ದಲ್ಲಾಳಿ ರುಸುಮು | | | | | |
| | • ಇತರೇ (ನಿರ್ದಿಷ್ಟಪಡಿಸಿ) | | | | | |
| | ಒಟ್ಟು (2) | | | | | |
| | ಒಟ್ಟು (B)=(1+2) | - | - | - | - | - |
| | ಒಟ್ಟು ಆಡಳಿತಾತ್ಮಕ ಸಿಬ್ಬಂದಿ ಸಂಭಾವನೆ | | | | | |
| | ಕಾಯ್ದೆ ರೀತ್ಯ ಗರಿಷ್ಠ ಮೊಬಲಗು | | | | | |

***C.*** **ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಕಾಲಿಕ ನಿರ್ದೇಶಕರು, ವ್ಯವಸ್ಥಾಪಕರಲ್ಲದ ಪ್ರಮುಖ ಆಡಳಿತ ಸಿಬ್ಬಂದಿಗಳ ಸಂಭಾವನೆ**

| ಕ್ರಮ ಸಂಖ್ಯೆ | ಸಂಭಾವನೆಯ ವಿವರಗಳು | ಪ್ರಮುಖ ಆಡಳಿತಾತ್ಮಕ ಸಿಬ್ಬಂದಿಗಳು | | | ಒಟ್ಟು ಮೊತ್ತ |
|---|---|---|---|---|---|
| | | ಸಿಇಓ/ ವ್ಯವಸ್ಥಾಪಕ ನಿರ್ದೇಶಕರು | ಕಂಪನಿ ಕಾರ್ಯದರ್ಶಿ | ಮುಖ್ಯ ಹಣಕಾಸು ಅಧಿಕಾರಿ | |
| 1 | 1. ಒಟ್ಟು ವೇತನ | Rs. | Rs. | Rs. | Rs. |
| | (a) ಆದಾಯ ತೆರಿಗೆ 1961 ಸೆಕ್ಷನ್ 17(1)ರ ರೀತ್ಯ ವೇತನ | 10,76,192 | 13,20,000 | 9,28,963 | **33,25,155** |
| | (b) ಆದಾಯ ತೆರಿಗೆ 1961 ಸೆಕ್ಷನ್ 17(2)ರ ರೀತ್ಯ ಸವಲತ್ತುಗಳು | | | | |
| | (c) ಆದಾಯ ತೆರಿಗೆ 1961ರ ಸೆಕ್ಷನ್ 17(3)ರ ರೀತ್ಯ ವೇತನದ ಬದಲಿಗೆ ಲಾಭ | | | | |
| 2 | ಸ್ಟಾಕ್ ಆಪ್ಷನ್ | | | | |
| 3 | ಪರಿಶ್ರಮ ಷೇರುಗಳು | | | | |
| 4 | ದಳ್ಳಾಳಿ ರುಸುಮು | | | | |
| | - ಲಾಭದ ಮೇಲಿನ ಶೇಕಡಾವಾರಾಗಿ | | | | |
| | - ಇತರೇ (ನಿರ್ಧಿಷ್ಟಪಡಿಸಿ) | | | | |
| 5 | ಇತರೇ (ದಯವಿಟ್ಟು ನಿರ್ಧಿಷ್ಟಪಡಿಸಿ) | | | | |
| | **ಒಟ್ಟು** | **10,76,192** | **13,20,000** | **9,28,963** | **33,25,155** |

**VIII. ದಂಡ/ಶಿಕ್ಷೆ/ಅಪರಾಧಗಳ ರಾಜಿ ಕಬೂಲಿಗಳು**

| ಮಾದರಿ | ಕಂಪನಿ ಕಾಯಿದೆಯ ಸೆಕ್ಷನ್ | ಸಂಕ್ಷಿಪ್ತ ವಿವರಗಳು | ವಿಧಿಸಲಾದ ದಂಡ/ಶಿಕ್ಷೆ/ ಅಪರಾಧ ರಾಜಿ ಕಬೂಲಿಗಳು | ಪ್ರಾಧಿಕಾರ [ಆರ್‌ಡಿ/ ಎನ್‌ಸಿಎಲ್‌ಟಿ/ ಕೋರ್ಟು] | ಮೇಲ್ಮನವಿ ಸಲ್ಲಿಸಲಾಗಿದ್ದರೆ ಅದರ ವಿವರಗಳು |
|---|---|---|---|---|---|
| **A. ಕಂಪನಿ** | | | | | |
| ದಂಡ | - | - | - | - | - |
| ಶಿಕ್ಷೆ | - | - | - | - | - |
| ರಾಜಿಕಬೂಲಿಗಳು | - | - | - | - | - |
| **B. ನಿರ್ದೇಶಕರುಗಳು** | | | | | |
| ದಂಡ | - | - | - | - | - |
| ಶಿಕ್ಷೆ | - | - | - | - | - |
| ರಾಜಿಕಬೂಲಿಗಳು | - | - | - | - | - |
| **C. ತಪ್ಪಿತಸ್ಥ ಇತರೇ ಅಧಿಕಾರಿಗಳು** | | | | | |
| ದಂಡ | - | - | - | - | - |
| ಶಿಕ್ಷೆ | - | - | - | - | - |
| ರಾಜಿಕಬೂಲಿಗಳು | - | - | - | - | - |

**ಸುಭಾಷ್ಚಂದ್ರ ಪಿ. ಕುದರಿ & ಕಂ.**
ಛಾರ್ಟರ್ಡ್ ಅಕೌಂಟೆಂಟ್ಸ್

ನಂ. 15, 1ನೇ ಮಹಡಿ, 1ನೇ ಅಡ್ಡರಸ್ತೆ, ನೆಹರುನಗರ
ಶೇಷಾದ್ರಿಪುರಂ, ಬೆಂಗಳೂರು-560 020
ದೂರವಾಣಿ : 080-23564975/23564976

## ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ(ಪರಿಷ್ಕೃತ)
## ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ಸದಸ್ಯರಿಗೆ

### ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಮೇಲಿನ ವರದಿ

ಸ್ಥಿತಿ ವಿವರಣಾ ಪಟ್ಟಿ, ಲಾಭ ನಷ್ಟದ ತಪ್ಸೀಲು, ಹಣ ಹರಿವಿನ ತಪ್ಸೀಲು ಮತ್ತು ಲೆಕ್ಕಾಚಾರಶಾಸ್ತ್ರಗಳ ಪ್ರಮುಖ ನೀತಿಗಳು ಮತ್ತು ಇತರೇ ವಿವರಣಾದಾಯಕ ಮಾಹಿತಿಗಳನ್ನೊಳಗೊಂಡ 31ನೇ ಮಾರ್ಚ್ 2016ರಂದು ಅಂತ್ಯಗೊಂಡ ವರ್ಷದ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳನ್ನು ನಾವು ಪರಿಶೋಧಿಸಿದ್ದೇವೆ ಮತ್ತು ನಮ್ಮ ವರದಿಯನ್ನು ತಾ. 5-8-2016ರಂದು ಸಲ್ಲಿಸಿದ್ದೇವೆ. ತದ ನಂತರ, ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಅವಲೋಕನಗಳ ಬೆಳಕಿನಲ್ಲಿ ನಮ್ಮ ವರದಿಯು ಪರಿಶ್ಕರಣೆಗೊಂಡಿದೆ. ಈ ವರದಿಯು ನಮ್ಮ ಹಿಂದಿನ ತಾ. 5-8-2016 ವರದಿಯನ್ನು ಅತಿಕ್ರಮಿಸುತ್ತದೆ.

### ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಬಗೆಗೆ ಆಡಳಿತ ವರ್ಗಗಳ ಜವಾಬ್ದಾರಿ

ಕಂಪನಿ ಕಾಯಿದೆ 2013ರ ಸೆಕ್ಷನ್ 134(5)ರಡಿಯಲ್ಲಿ ಹೆಸರಿಸಲಾದ ಲೆಕ್ಕಾಚಾರದ ನೀತಿಗಳಿಗನುಸಾರವಾಗಿ ಆರ್ಥಿಕ ಸ್ಥಿತಿಗತಿಗಳು, ಆರ್ಥಿಕ ನಿರ್ವಹಣೆ ಮತ್ತು ಹಣದ ಹರಿವಿನ ಬಗೆಗೆ ನೈಜ ಮತ್ತು ನ್ಯಾಯೋಚಿತವಾದ ನೋಟವನ್ನು ಕೊಡುವ ಸೆಕ್ಷನ್ 133 ರಡಿಯಲ್ಲಿ ನಿರ್ಧಿಷ್ಟ ಪಡಿಸಲಾದ ಲೆಕ್ಕಾಚಾರಶಾಸ್ತ್ರದ ಮಾನದಂಡಗಳು ಮತ್ತು ಕಂಪನಿಗಳ (ಲೆಕ್ಕಪತ್ರಗಳು) ನಿಯಮ 2014ರ 7ನೇ ನಿಯಮದ ಅಡಿಯಲ್ಲಿ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ತಯಾರಿಕೆ ಆಡಳಿತ ವರ್ಗದ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಯಲ್ಲಿ, ವಂಚನೆ ಅಥವಾ ತಪ್ಪು ಹೇಳಿಕೆಗಳಿಂದ ಉಂಟಾದ ಗಣ್ಯ ತಪ್ಪುಗಳಿಂದ ಹೊರತಾದ ನೈಜವಾದ ಮತ್ತು ನ್ಯಾಯೋಚಿತವಾದ ನೋಟವನ್ನು ನೀಡುವ ಸ್ಥಿತಿ ವಿವರಣಾ ಪಟ್ಟಿಗಳ ತಯಾರಿಕೆ ಮತ್ತು ಪ್ರಕಟಗೊಳಿಸುವಿಕೆಗಳಿಕೆ ಅವಶ್ಯಕವಾದ ಆಂತರಿಕ ನಿಯಂತ್ರಣಗಳ ವಿನ್ಯಾಸ, ಅಳವಡಿಕೆ ಮತ್ತು ಅವುಗಳ ನಿರ್ವಹಣೆ; ಕಂಪನಿಯ ಆಸ್ತಿಗಳ ಸಂರಕ್ಷಣೆ ಮತ್ತು ವಂಚನೆಗಳನ್ನು ಮತ್ತು ಇತರೆ ಅಕ್ರಮಗಳನ್ನು ಪತ್ತೆ ಮಾಡುವುದು, ಸೂಕ್ತ ಲೆಕ್ಕಾಚಾರದ ನೀತಿಗಳನ್ನು ಆಯ್ದು ಅಳವಡಿಸಿಕೊಳ್ಳುವಲ್ಲಿ ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಮತ್ತು ಉಚಿತ ಅಂದಾಜುಗಳನ್ನು ವಿವೇಕಯುಕ್ತವಾಗಿ ವಿನ್ಯಾಸಗೊಳಿಸಿ ಅಳವಡಿಸಿಕೊಳ್ಳುವುದೂ ಸೇರಿರುತ್ತವೆ.

### ಲೆಕ್ಕ ಪರಿಶೋಧಕರ ಜವಾಬ್ದಾರಿ

ನಮ್ಮ ಲೆಕ್ಕ ಪರಿಶೋಧನೆಯನ್ನು ಆಧರಿಸಿ ಈ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಮೇಲೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ.

ಕಾಯಿದೆ ಮತ್ತು ಅದರಡಿಯಲ್ಲಿ ರೂಪಿಸಲಾದ ನಿಯಮಗಳನುಸಾರ ಪಾಲಿಸಬೇಕಾದ ಲೆಕ್ಕಶಾಸ್ತ್ರಗಳ ಮತ್ತು ಲೆಕ್ಕ ಪರಿಶೋಧನೆಗಳ ಮಾನದಂಡಗಳನ್ನೊಳಗೊಂಡ ವಿಷಯಗಳನ್ನು ನಮ್ಮ ವರದಿಯಲ್ಲಿ ಗಣನೆಗೆ ತೆಗೆದುಕೊಂಡಿದ್ದೇವೆ.

ಕಾಯಿದೆಯ ಸೆಕ್ಷನ್ 143(10)ರಡಿಯಲ್ಲಿನ ನಿರ್ಧಿಷ್ಟ ಪಡಿಸಲಾದ ಲೆಕ್ಕ ಪರಿಶೋಧನಾ ಮಾನದಂಡಗಳ ಆಧಾರದ ಮೇಲೆ ನಾವು ಲೆಕ್ಕಪರಿಶೋಧನೆಯನ್ನು ಮಾಡಿರುತ್ತೇವೆ. ಈ ಮಾನದಂಡಗಳು ನಾವು ನೈತಿಕ ಅವಶ್ಯಕತೆಗಳಿಗನುಸಾರವಾಗಿ ನಮ್ಮ ಲೆಕ್ಕ ಪರಿಶೋಧನೆಯನ್ನು ಯೋಜಿಸಿಕೊಂಡು ಹಾಗೂ ನಡೆಸಿ, ಲೆಕ್ಕಪತ್ರಗಳು ಗಣ್ಯ ಅಪಹೇಳಿಕೆಗಳಿಂದ ಮುಕ್ತವಾಗಿದೆ ಎಂಬ ಆಶ್ವಾಸನೆಯನ್ನು ಪಡೆಯುವ ಅವಶ್ಯಕತೆಯನ್ನು ಹೇಳಿವೆ.

ಒಂದು ಪರಿಶೋಧನೆಯು, ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳಲ್ಲಿ ತೋರಿಸಲಾದ ಮೊಬಲಗುಗಳ ಮತ್ತು ಪ್ರಕಟಣೆಗಳ ಬಗೆಗೆ ಪರಿಶೋಧನಾ ಸಾಕ್ಷ್ಯಗಳನ್ನು ಪಡೆಯಬೇಕಿರುವ ಪ್ರಕ್ರಿಯೆಗಳನ್ನೂ ಒಳಗೊಂಡಿರುತ್ತದೆ. ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳಲ್ಲಿ ವಂಚನೆ ಅಥವಾ ತಪ್ಪುಗಳಿಂದಾಗಬಹುದಾದ ಗುರುತರ ಅಪಹೇಳಿಕೆಗಳಿಂದಾದ ಅಪಾಯಗಳನ್ನು ನಿರ್ಧರಿಸುವ ಪ್ರಕ್ರಿಯೆಗಳ ಆಯ್ಕೆಯೂ ಪರಿಶೋಧಕರ ವಿವೇಚನೆಗೆ ಒಳಪಟ್ಟಿರುತ್ತದೆ. ಈ ಅಪಾಯಗಳನ್ನು ನಿರ್ಧರಿಸುವಾಗ ಲೆಕ್ಕ ಪರಿಶೋಧಕರು ಕಂಪನಿಯ ಲೆಕ್ಕ ಪತ್ರಗಳು ನೈಜ ಮತ್ತು ನ್ಯಾಯಯುತವಾದ ನೋಟವನ್ನು ನೀಡುತ್ತವೆ ಎಂಬುದನ್ನು ಮನಗಾಣುತ್ತಾರೆ. ಲೆಕ್ಕ ಪರಿಶೋಧನೆಯು, ಕಂಪನಿಯ ನಿರ್ದೇಶಕರುಗಳು ಬಳಸಿಕೊಂಡ ಲೆಕ್ಕಾಚಾರ ನೀತಿಗಳ ಮತ್ತು ಅಂದಾಜುಗಳ ಯಕ್ತಾಯುಕ್ತತೆಗಳ ಮತ್ತು ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಪ್ರಸ್ತುತ ಪಡಿಸುವಿಕೆಯ ಬಗೆಗಿನ ಸಮಗ್ರ ಮೌಲ್ಯೀಕರಣವನ್ನೂ ಒಳಗೊಂಡಿರುತ್ತದೆ.

ನಮ್ಮ ಲೆಕ್ಕ ಪರಿಶೋಧನಾ ಅಭಿಪ್ರಾಯಗಳಿಗಾಗಿ, ನಾವು ಪಡೆದಿರುವ ಪರಿಶೋಧನಾ ಸಾಕ್ಷ್ಯಗಳು ಸಾಕಷ್ಟಿದ್ದು ಅವು ಸೂಕ್ತವಾಗಿವೆ ಎಂದು ನಾವು ನಂಬುತ್ತೇವೆ.

**ಷರತ್ತುಬದ್ಧ ಅಭಿಪ್ರಾಯದ ಆಧಾರ :**

ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಟಿಪ್ಪಣಿಗಳ ಈ ಕೆಳಕಂಡ ವಿಷಯಗಳ ಬಗೆಗೆ ಗಮನ ಸೆಳೆಯ ಬಯಸುತ್ತೇವೆ.

ಎ. ಲೆಕ್ಕಪತ್ರಗಳ ಮೇಲಿನ ಟಿಪ್ಪಣಿ ಸಂಖ್ಯೆ 28–II–4 ರಲ್ಲಿ ಹೇಳಿರುವ 2008–09, 2009–10, 2010–11, 2012–13, 2015–16ನೇ ವರ್ಷಗಳಿಗೆ ಎಕ್ಸ್‌ಗ್ರೇಷಿಯಾ ಬಗೆಗಿನ ಒಟ್ಟು ಮೊಬಲಗಾದ 1320.45 ಲಕ್ಷ ರೂ.ಗಳ ಪಾವತಿಗಾಗಿ ಸರ್ಕಾರದ ಅನುಮೋದನೆಯನ್ನು ಕಾಯ್ದಿರಿಸಿ ಅದಕ್ಕೆ ಮುನ್ನೇರ್ಪಾಡುಗಳನ್ನು ಮಾಡಿರುವುದು ಮತ್ತು ಉತ್ಪಾದನಾ ಸಂಬಂಧಿತ ಬಹುಮಾನದೆಡೆಗೆ 2011–12ನೇ ವರ್ಷಕ್ಕೆ ರೂ. 451.62 ಲಕ್ಷ ರೂ.ಗಳ ಮುನ್ನೇರ್ಪಾಡನ್ನು ಮಾಡಿರುವುದು.

ಮೇಲ್ಕಂಡ ಅನುಗ್ರಹ ಹಣದ(ಎಕ್ಸ್‌ಗ್ರೇಷಿಯಾ) ಪಾವತಿಗಾಗಿ, ಮತ್ತು ಉತ್ಪಾದನಾ ಸಂಬಂಧಿತ ಬಹುಮಾನಗಳೆಡೆಗಿನ ಏರ್ಪಾಡುಗಳಿಗೆ ಸರ್ಕಾರದ ಅನುಮೋದನೆಯನ್ನು ಪಡೆಯಬೇಕಿದೆ. ಆದಾಗ್ಯೂ ಸಂಬಂಧಿತ ಅಧಿಕಾರಿಗಳಿಂದ ಅನುಮೋದನೆಯನ್ನು ಸ್ವೀಕರಿಸಲಾಗಿಲ್ಲ.

ಈ ಸನ್ನಿವೇಶದಲ್ಲಿ ಕಂಪನಿಯ ಆರ್ಥಿಕ ಸ್ಥಿತಿವಿವರಣಾ ಪಟ್ಟಿಗಳ ಮೇಲೆ ಈ ಲೆಕ್ಕಗಳ ಪರಿಣಾಮವನ್ನು ನಾವು ಖಚಿತಪಡಿಸಿಕೊಳ್ಳಲಾಗಿಲ್ಲ.

ಬಿ. ಲೆಕ್ಕಪತ್ರಗಳ ಮೇಲಿನ ಟಿಪ್ಪಣಿ ಸಂಖ್ಯೆ 28–II–16 ರಲ್ಲಿ ಹೇಳಿರುವ ಹಣದ ಸ್ಥಿರೀಕರಣದ ಬಗೆಗೆ.

ಈ ದಿಸೆಯಲ್ಲಿ 31–3–2016ರಂದು ಇರುವ ಉಳಿಕೆ ಹಣದ ಬಗೆಗಿನ ಸಾಲಗಳು ಮತ್ತು ಮುಂಗಡಗಳ ಮತ್ತು ಠೇವಣಿಗಳ ಬಗೆಗಿನ ಎಲ್ಲಾ ಸಾಲಗಾರರಿಗೂ ಪತ್ರಗಳನ್ನು ಬರೆಯಲಾಗಿದೆ. 31–3–2016ರಲ್ಲಿನ ಉಳಿಕೆ ಹಣದ ಸ್ಥಿರೀಕರಣವನ್ನು ಶಾಸನಬದ್ಧ ಲೆಕ್ಕ ಪರಿಶೋಧಕರಿಗೆ ನೇರವಾಗಿ ಕಳುಹಿಸುವಂತೆ ಕೋರಲಾಗಿದೆ.

ನಾವು ಕೆಲವು ಸ್ಥಿರೀಕರಣಗಳನ್ನು ಸ್ವೀಕರಿಸಿದ್ದೇವೆ ಮತ್ತು ಠೇವಣಿಗಳು ಸ್ಥಿರೀಕರಣ ಮತ್ತು ಹೊಂದಾಣಿಕೆಗಳಿಗೊಳಪಟ್ಟಿವೆ.

ಈ ಸನ್ನಿವೇಶದಲ್ಲಿ ಕಂಪನಿಯ ಆರ್ಥಿಕ ಸ್ಥಿತಿವಿವರಣಾ ಪಟ್ಟಿಗಳ ಮೇಲೆ ಈ ಲೆಕ್ಕಗಳ ಪರಿಣಾಮವನ್ನು ನಾವು ಖಚಿತಪಡಿಸಿಕೊಳ್ಳಲಾಗಿಲ್ಲ.

ಸಿ. ಸಿ & ಎಜಿರವರು ನೀಡಿದ ಪೂರ್ವಭಾವಿ ಟೀಕೆಗಳನುಸಾರ ರಾಜಧನದ ಮುನ್ನೇರ್ಪಾಡನ್ನು ಮಾಡದೇ ಇರುವ ಕಾರಣ ಇತರೇ ವೆಚ್ಚಗಳನ್ನು ಕಡಿಮೆ ತೋರಿಸಿ ಮತ್ತು ಅದರಿಂದಾಗಿ 136.36 ಲಕ್ಷ ರೂ.ಗಳ ಹೆಚ್ಚಿನ ಲಾಭವನ್ನು ತೋರಿಸಲಾಗಿದೆ.

ಡಿ. ಸಿ & ಎಜಿ ರವರು ನೀಡಿದ ಪೂರ್ವಭಾವಿ ಟೀಕೆಗಳಿಗನುಸಾರ, ಹಣ ಹರಿವಿನ ತಪ್ಸೀಲಿನ ಬಗೆಗೆ:

(i) ನಿರ್ವಹಣಾ ಚಟುವಟಿಕೆಗಳಿಂದಾದ ಹಣ ಹರಿವನ್ನು 105.85 ಕೋಟಿ ರೂ.ಗಳಷ್ಟು ಹೆಚ್ಚಾಗಿ ತೋರಿಸಲಾಗಿದೆ ಇದು ಹೂಡಿಕಾ ಚಟುವಟಿಕೆಗಳಿಂದ ಬಂದ ಹಣವನ್ನು, ವ್ಯಾಪಾರಿ ಬಾಕಿಗಳು ಮತ್ತು ಆದಾಯ ತೆರಿಗೆಯ ಕಡಿತಗಳನ್ನು ಸೇರಿಸಿರುವುದರಿಂದಾಗಿದೆ.

(ii) ಹೂಡಿಕಾ ಚಟುವಟಿಕೆಗಳಿಂದಾದ ಹಣ ಹರಿವನ್ನು 104.40 ಕೋಟಿಗಳಷ್ಟು ಕಡಿಮೆಯಾಗಿ ತೋರಿಸಲಾಗಿದೆ. ಇದು ವ್ಯಾಪಾರಿ ಬಾಕಿಗಳು, ವಾಸ್ತವ ಸ್ವೀಕೃತಿಯ ಬದಲಿಗೆ ಹೂಡಿಕೆಗಳ ಮಾರಾಟದಿಂದಾದ ಲಾಭವನ್ನು ಸೇರಿಸಿರುವುದರಿಂದ ಮತ್ತು ಬಡ್ಡಿಯೆಡೆಗೆ ವಾಸ್ತವ ಸ್ವೀಕೃತಿಯನ್ನು ಸೇರಿಸದೇ ಇರುವುದರಿಂದಾಗಿದೆ.

(iii) ಇತರೇ ಆದಾಯದಿಂದಾದ 2.23 ಕೋಟಿ ರೂ.ಗಳನ್ನು ನಿರ್ವಹಣಾ, ಹೂಡಿಕೆ ಮತ್ತು ಹಣಕಾಸಿನ ಚಟುವಟಿಕೆಗಳೆಂದು ಸರಿಯಾಗಿ ವಿಂಗಡಿಸಬೇಕಾಗಿತ್ತು.

**ಷರತ್ತುಬದ್ಧ ಅಭಿಪ್ರಾಯ :**

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿದ ವಿವರಣೆಗಳ ಪ್ರಕಾರ, ಲೆಕ್ಕ ಪತ್ರಗಳು ಪ್ರಮುಖವಾದ ಲೆಕ್ಕಪತ್ರಗಳನ್ನಿಡುವ ವಿಧಾನಗಳಿಗನುಸಾರವಾಗಿದ್ದು, ಷರತ್ತುಬದ್ಧ ಅಭಿಪ್ರಾಯಗಳ ವಿಷಯಗಳ ಪ್ಯಾರಾದಲ್ಲಿ ಹೇಳಿದ ಪರಿಣಾಮಗಳನ್ನು ಹೊರತು ಪಡಿಸಿ ಕಂಪನಿಗಳ ಕಾಯಿದೆಯಲ್ಲಿ ತಿಳಿಸಿದ ರೀತಿ ಮಾಹಿತಿ ನೀಡುತ್ತವೆ. ಇದು ಭಾರತದಲ್ಲಿ ಒಪ್ಪಿಗೆಯಾಗಿರುವ ಲೆಕ್ಕಪತ್ರಗಳನ್ನಿಡುವ ನೀತಿ/ ತತ್ವಗಳಿಗನುಗುಣವಾಗಿದ್ದು:

ಎ. ಸ್ಥಿತಿ ವಿವರಣಾ ಪಟ್ಟಿಯ ಬಗೆಗೆ, 31–3–2016ರಲ್ಲಿದ್ದಂತೆ ಕಂಪನಿಯ ವ್ಯವಹಾರ ಸ್ಥಿತಿಯ ಬಗೆಗೆ,

ಬಿ. ಕಂಪನಿಯ ಲಾಭ ಮತ್ತು ನಷ್ಟದ ತಪ್ಸೀಲು ಬಗೆಗೆ 31–3–2016ಕ್ಕೆ ಕೊನೆಗೊಂಡ ವರ್ಷಕ್ಕೆ, ಕಂಪನಿಯ ಲಾಭದ ಬಗೆಗೆ,

ಸಿ. ಆ ದಿನಾಂಕಕ್ಕೆ ಕೊನೆಗೊಂಡ ವರ್ಷಕ್ಕೆ, ಹಣ ಹರಿವಿನ ತಪ್ಸೀಲು, ಹಣ ಹರಿವಿನ ಬಗೆಗೆ,

ನೈಜ ಮತ್ತು ನ್ಯಾಯಬದ್ಧ ನೋಟವನ್ನು ನೀಡುತ್ತವೆ.

**ಇತರೇ ನ್ಯಾಯಿಕ ಮತ್ತು ನಿಯಂತ್ರಕಗಳ ಅವಶ್ಯಕತೆಗಳ ಬಗೆಗೆ ವರದಿ :**

1. ಕಂಪನಿ ಕಾಯಿದೆ ಸೆಕ್ಷನ್ 143(11)ರಡಿಯಲ್ಲಿ ಕೇಂದ್ರ ಸರ್ಕಾರವು ಹೊರಡಿಸಿದ ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ 2016ರಲ್ಲಿನ ಅವಶ್ಯಕತೆಯಂತೆ, ಪ್ಯಾರಾ 3 ಮತ್ತು 4ರಲ್ಲಿ ನಿಗದಿ ಪಡಿಸಿದ ವಿಷಯಗಳ ಬಗೆಗೆ ನಾವು ಈ ರೀತಿ ವರದಿ ನೀಡುತ್ತೇವೆ.

2. ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು ಕಾಯಿದೆಯ ಸೆಕ್ಷನ್ 143(5)ರಡಿಯಲ್ಲಿ ನಿರ್ದಿಷ್ಟಪಡಿಸಲಾದ ವಿಷಯಗಳನ್ನು ನಾವು ಅನುಬಂಧ–IIರಲ್ಲಿ ನೀಡುತ್ತಿದ್ದೇವೆ.

3. ಕಾಯಿದೆಯ ಸೆಕ್ಷನ್ 143(3)ರಲ್ಲಿ ನಿರ್ದಿಷ್ಟಪಡಿಸಲಾದಂತೆ ನಾವು ಈ ಕೆಳಗಿನಂತೆ ವರದಿ ನೀಡುತ್ತಿದ್ದೇವೆ.

ಎ. ನಮ್ಮ ಪರಿಶೋಧನೆಗಾಗಿ ನಮ್ಮ ತಿಳುವಳಿಕೆ ಮತ್ತು ನಂಬಿಕೆಗೆ ಅವಶ್ಯಕವೆನಿಸುವ ಎಲ್ಲ ಮಾಹಿತಿಗಳನ್ನು ಮತ್ತು ವಿವರಣೆಗಳನ್ನು ನಾವು ಕೋರಿದ್ದೇವೆ ಮತ್ತು ಪಡೆದಿದ್ದೇವೆ.

ಬಿ. ನಮ್ಮ ಅಭಿಪ್ರಾಯದಲ್ಲಿ ಕಾನೂನು ಪ್ರಕಾರ ಇಡಬೇಕಾದ ಲೆಕ್ಕಪುಸ್ತಕಗಳನ್ನು ಕಂಪನಿಯು ಇಟ್ಟಿದೆ ಎಂದು ಆ ಲೆಕ್ಕಪುಸ್ತಕಗಳ ಪರೀಕ್ಷೆಯಿಂದ ವ್ಯಕ್ತವಾಗುತ್ತದೆ.

ಸಿ. ಈ ವರದಿಯಲ್ಲಿ ವ್ಯವಹರಿಸಿರುವ ಸ್ಥಿತಿ ವಿವರಣಾ ಪಟ್ಟಿ, ಲಾಭ ನಷ್ಟದ ತಪ್ಸೀಲು ಹಣ ಹರಿವಿನ ತಪ್ಸೀಲುಗಳು ಲೆಕ್ಕ ಪುಸ್ತಕಗಳೊಂದಿಗೆ ಹೊಂದಾಣಿಕೆಯಾಗುತ್ತವೆ.

ಡಿ. ಷರತ್ತುಬದ್ಧ ಅಭಿಪ್ರಾಯದ ಆಧಾರದ ಪ್ಯಾರಾದಲ್ಲಿ ತಿಳಿಸಿರುವ ವಿಷಯಗಳ ಪರಿಣಾಮಗಳನ್ನು ಹೊರತುಪಡಿಸಿ ಸ್ಥಿತಿವಿವರಣಾ ಪಟ್ಟಿ, ಲಾಭ ನಷ್ಟದ ತಪ್ಸೀಲು, ಹಣ ಹರಿವಿನ ತಪ್ಸೀಲುಗಳು ಕಂಪನಿ ಕಾಯಿದೆ 2013ರ ಸೆಕ್ಷನ್ 133 ರೊಂದಿಗೆ ಓದಲಾದ ಕಂಪನಿ(ಲೆಕ್ಕಪತ್ರಗಳು) ನಿಯಮಗಳು 2014ರಡಿಯಲ್ಲಿ ನಿರ್ದಿಷ್ಟಪಡಿಸಲಾದ ಲೆಕ್ಕಾಚಾರ ಶಾಸ್ತ್ರದ ಮಾನದಂಡಗಳಿಗನುಸಾರವಾಗಿವೆ.

ಇ. ನಿರ್ದೇಶಕರುಗಳಿಂದ ಸ್ವೀಕರಿಸಲಾದ ಮತ್ತು ನಿರ್ದೇಶಕ ಮಂಡಳಿಯ ದಾಖಲೆಗಳಲ್ಲಿ ಸೇರಿಸಲಾದ ವಿವರಣೆಗಳ ಆಧಾರದ ಮೇಲೆ, ಕಂಪನಿ ಕಾಯಿದೆ ಸೆಕ್ಷನ್ 164(2)ರ ಪ್ರಕಾರ ಯಾವುದೇ ನಿರ್ದೇಶಕರೂ ನಿರ್ದೇಶಕರಾಗಿ ನಿಯುಕ್ತಿಗೊಳ್ಳಲು ಅನರ್ಹರಾಗಿಲ್ಲ.

ಎಫ್.ಆರ್ಥಿಕ ಸ್ಥಿತಿಗತಿಗಳ ವರದಿಗಾರಿಕೆಯೆಡೆಗೆ ಆಂತರಿಕ ಆರ್ಥಿಕ ನಿಯಂತ್ರಕಗಳ ಪರ್ಯಾಪ್ತತೆ ಮತ್ತು ಅವುಗಳ ನಿರ್ವಹಣಾ ಪರಿಣಾಮಗಳ ಬಗೆಗೆ, ನಮ್ಮ ಪ್ರತ್ಯೇಕ ವರದಿಯನ್ನು ಅವಲೋಕಿಸಿರಿ.

ಜಿ. ಕಂಪನಿಗಳ (ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು 2014ರ ನಿಯಮ 11ರಲ್ಲಿ ಹೇಳಿರುವಂತೆ ಲೆಕ್ಕ ಪರಿಶೋಧಕರ ವರದಿಯಲ್ಲಿ ಸೇರಿಸಬೇಕಾದ ವಿಷಯ ಬಗೆಗೆ, ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳಿಗನುಸಾರ,

(i) 31ನೇ ಮಾರ್ಚ್ 2016ರ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಮೇಲೆ ಬಾಕಿ ಇರುವ ವ್ಯಾಜ್ಯಗಳ ಆರ್ಥಿಕ ಪರಿಣಾಮವನ್ನು ಕಂಪನಿಯು ತೋರಿಸಿದೆ.

(ii) ಅನ್ವಯವಾಗುವ ಕಾನೂನು ಮತ್ತು ಲೆಕ್ಕಾಚಾರ ಶಾಸ್ತ್ರದ ಮಾನದಂಡಗಳ ಪ್ರಕಾರ, ಗುರುತರ ಮತ್ತು ಪೂರ್ವಭಾವಿಯಾಗಿ ತಿಳಿಯುವ ದೀರ್ಘಕಾಲೀನ ಒಪ್ಪಂದಗಳಿಗೆ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳಲ್ಲಿ ಕಂಪನಿಯು ಮುನ್ನೇರ್ಪಾಡುಗಳನ್ನು ಮಾಡಿದೆ.

(iii) ಹೂಡಿಕೆದಾರ ಶಿಕ್ಷಣ ಮತ್ತು ಕಲ್ಯಾಣನಿಧಿಗೆ ವರ್ಗಾಯಿಸಬೇಕಾದ ಮೊಬಲಗನ್ನು ವರ್ಗಾಯಿಸಲು ಕಂಪನಿಯು ಯಾವುದೇ ವಿಳಂಬವನ್ನು ಮಾಡಿರುವುದಿಲ್ಲ.

**ಸುಭಾಷ್ಚಂದ್ರ ಪಿ. ಕುದರಿ & ಕಂ. ಪರವಾಗಿ**
ಛಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆ ನೋ. ಸಂ. 004094S
ಸಹಿ/–
**ಎಸ್.ಪಿ. ಕುದರಿ**
ಮಾಲೀಕರು
ಸದಸ್ಯತ್ವ ಸಂಖ್ಯೆ : 020513

**ಸ್ಥಳ : ಬೆಂಗಳೂರು**
**ತಾ : 01 ಸೆಪ್ಟೆಂಬರ್ 2016**

# ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

## ಲೆಕ್ಕ ಪರಿಶೋಧಕರ ವರದಿಗೆ ಅನುಬಂಧ

**(ನಮ್ಮ ವರದಿಯ ಪ್ಯಾರಾ 1ರಡಿಯಲ್ಲಿನ ನ್ಯಾಯಿಕ ಮತ್ತು ನಿಯಂತ್ರಕಗಳ ಅವಶ್ಯಕತೆಗಳ ಬಗೆಗೆ ನಮ್ಮ ಇದೇ ತಾರೀಖಿನ ವರದಿಯಲ್ಲಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ಸದಸ್ಯರಿಗೆ 31ನೇ ಮಾರ್ಚ್ 2016ನೇ ಸಾಲಿಗೆ ನೀಡಿರುವ ವರದಿಯಲ್ಲಿ ತಿಳಿಸಿರುವಂತೆ)**

ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ ಮತ್ತು ನಮ್ಮ ಪರಿಶೋಧನೆಗಳಿಗೆ ದೊರಕಿಸಲಾದ ದಾಖಲೆಗಳು ಮತ್ತು ದಸ್ತಾವೇಜುಗಳ ಆಧಾರದ ಮೇಲೆ, ನಾವು ಈ ಕೆಳಕಂಡಂತೆ ವರದಿ ಮಾಡುತ್ತೇವೆ.

1. ಕಂಪನಿಯ ಸ್ಥಿರಾಸ್ತಿಗಳ ಬಗೆಗೆ

   ಎ. ಕಂಪನಿಯು ಯೋಗ್ಯ ದಸ್ತಾವೇಜುಗಳನ್ನು ಇಟ್ಟಿದ್ದು ಅವುಗಳಲ್ಲಿ ಪರಿಮಾಣಾತ್ಮಕ ಮತ್ತು ಸ್ಥಳದ ವಿವರಣೆಗಳನ್ನು ನೀಡಲಾಗಿದೆ.

   ಬಿ. ಪ್ರಸಕ್ತ ವರ್ಷದಲ್ಲಿ ಸ್ಥಿರ ಆಸ್ತಿಗಳನ್ನು ಆಡಳಿತ ವರ್ಗವು ಭೌತಿಕವಾಗಿ ಯುಕ್ತ ಮಧ್ಯಂತರಗಳಲ್ಲಿ, ಕಂಪನಿಯ ಗಾತ್ರ, ವ್ಯವಹಾರ ಮತ್ತು ಸ್ಥಿರಾಸ್ತಿಗಳ ಸ್ವರೂಪಕ್ಕನುಗುಣವಾಗಿ ಪರಿಶೀಲಿಸಿದೆಯೆಂದು ಕಂಪನಿಯ ಆಡಳಿತವರ್ಗವು ಪ್ರಮಾಣೀಕರಿಸಿದೆ. ಅಂತಹ ಪರಿಶೀಲನೆಯಲ್ಲಿ ದಾಖಲೆಗಳಿಗೆ ಹೋಲಿಸಿದಾಗ ಯಾವುದೇ ಗಣನೀಯ ಅಸಾಂಗ್ಯತಗಳು ಕಂಡು ಬಂದಿಲ್ಲವೆಂದು ನಮಗೆ ತಿಳಿಸಲಾಗಿದೆ

   ಸಿ. ಸ್ಥಿರಾಸ್ತಿಗಳ ಬಗೆಗಿನ ದಸ್ತಾವೇಜುಗಳು ಕಂಪನಿಯ ಹೆಸರಿನಲ್ಲಿವೆ.

2. ನಮಗೆ ತಿಳಿಸಿದ ಪ್ರಕಾರ ವಸ್ತುಗಳ ಪಟ್ಟಿಯನ್ನು ಆಡಳಿತ ವರ್ಗವು ಪ್ರಸ್ತುತವರ್ಷದಲ್ಲಿ ಭೌತಿಕವಾಗಿ ಪರಿಶೀಲಿಸಿದೆ. ನಮ್ಮ ಅಭಿಪ್ರಾಯದಲ್ಲಿ ಈ ಭೌತಿಕ ಪರಿಶೀಲನೆಯು ಯುಕ್ತ ಮಧ್ಯಂತರಗಳಲ್ಲಿ ಇದ್ದು ಕಂಪನಿಯ ಗಾತ್ರ ಮತ್ತು ವ್ಯವಹಾರದ ಸ್ವರೂಪಕ್ಕನುಗುಣವಾಗಿದೆ.

3. ಕಂಪನಿಯು ಕಾಯಿದೆ ಸೆಕ್ಷನ್ 189ರಡಿಯಲ್ಲಿನ ಇಡಬೇಕಾದ ದಾಖಲೆಗಳ ವ್ಯಾಪ್ತಿಯಲ್ಲಿ ಇತರೇ ಕಂಪನಿಗಳು, ಫರ್ಮ್‌ಗಳು, ನಿಯಮಿತ ಪಾಲುದಾರಿಕೆ ಫರ್ಮಗಳು ಮತ್ತು ಇತರೇ ಪಕ್ಷಾಕಾರರುಗಳಿಗೆ ಭದ್ರತೆಯಿರುವ ಅಥವಾ ಭದ್ರತೆ ಇರದ ಯಾವುದೇ ಸಾಲಗಳನ್ನು ಕಂಪನಿಯು ನೀಡಿಲ್ಲ.

4. ಇತರರು ಬ್ಯಾಂಕುಗಳಿಂದ ಅಥವಾ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳೆಡೆಗೆ, ಕಂಪನಿಯು ಯಾವುದೇ ಸಾಲಗಳು, ಹೂಡಿಕೆಗಳು, ಗ್ಯಾರಂಟಿಗಳು ಮತ್ತು ಭದ್ರತೆಗಳನ್ನು ನೀಡಿಲ್ಲ. ಹಾಗಾಗಿ ಸೆಕ್ಷನ್ 185 ಮತ್ತು 186ಗಳು ಅನ್ವಯವಾಗುವುದಿಲ್ಲ.

5. ನಮ್ಮ ಅಭಿಪ್ರಾಯದಲ್ಲಿ ಭಾರತೀಯ ರಿಜರ್ವ್ ಬ್ಯಾಂಕಿನ ನಿರ್ದೇಶನಗಳ ಮತ್ತು ಸೆಕ್ಷನ್ 73 ರಿಂದ 76 ಅಥವಾ ಅವುಗಳಡಿಯಲ್ಲಿನ ಇತರ ಉಪಬಂಧಗಳ ಉಲ್ಲಂಘನೆಯಿಂದಾಗಿ ಕಂಪನಿಯು ಯಾವುದೇ ಠೇವಣಿಗಳನ್ನು ಸ್ವೀಕರಿಸಿಲ್ಲ. ಯಾವುದೇ ಉಲ್ಲಂಘನೆಗಾಗಿ ಕಂಪನಿ ಕಾನೂನು ಮಂಡಳಿ ಅಥವಾ ಕಂಪನಿ ಕಾನೂನು ಟ್ರಿಬ್ಯುನಲ್ ಅಥವಾ ರಿಜರ್ವ್ ಬ್ಯಾಂಕ್ ಅಥವಾ ನ್ಯಾಯಾಲಯ ಯಾವುದೇ ಉಲ್ಲಂಘನೆಗಳ ಬಗೆಗೆ ಯಾವುದೇ ಆದೇಶಗಳನ್ನು ನೀಡಿಲ್ಲ.

6. ಕಂಪನಿ ಕಾಯಿದೆ 2013ರ ಸೆಕ್ಷನ್148ರಡಿಯಲ್ಲಿ ಇಟ್ಟಿರುವ ವೆಚ್ಚಗಳ ದಾಖಲಾತಿಗಳನ್ನು ನಾವು ವಿಮರ್ಶಿಸಿದ್ದೇವೆ ಮತ್ತು ಮೇಲ್ನೋಟಕ್ಕೆ ಕಂಪನಿಯು ನಿರ್ದಿಷ್ಟ ದಾಖಲೆಗಳನ್ನು ಇಟ್ಟಿರುವುದೆಂದು ನಾವು ಅಭಿಪ್ರಾಯಪಡುತ್ತೇವೆ. ಆದಾಗ್ಯೂ ಆ ದಾಖಲೆಗಳು ಸರಿಯಾಗಿವೆಯೇ ಮತ್ತು ಸಾಕಷ್ಟಿವೆಯೇ ಮತ್ತು ಸರಿಯಾಗಿವೆಯೆ ಎಂಬುದರ ಬಗೆಗೆ ದೀರ್ಘ ಪರಿಶೋಧನೆಯನ್ನು ನಡೆಸಿಲ್ಲ.

7. ಕಾನೂನು ಬದ್ಧ ಬಾಕಿಗಳೆಡೆಗೆ

   ಎ) ಕಂಪನಿಯು ಅನ್ವಯವಾಗುವ ಭವಿಷ್ಯನಿಧಿ, ಇಎಸ್ಐ, ಆದಾಯ ತೆರಿಗೆ, ಮಾರಾಟ ತೆರಿಗೆ, ಸಂಪತ್ತು ತೆರಿಗೆ, ಸೇವಾ ತೆರಿಗೆ, ಸೀಮಾಶುಲ್ಕ, ಅಬ್ಕಾರಿ ಸುಂಕ, ಮತ್ತು ಮೌಲ್ಯವರ್ಧಿತ ತೆರಿಗೆಗಳೆಡೆಗಿನ ನಿರ್ವಿವಾದಿತ ಬಾಕಿಗಳನ್ನು ಸಾಮಾನ್ಯವಾಗಿ ಕ್ರಮಬದ್ಧವಾಗಿ ಸಮುಚಿತ ಪ್ರಾಧಿಕಾರಗಳಲ್ಲಿ ಠೇವಣಿ ಇಡುತ್ತಿದೆ.